ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

# ಪಶುವೈದ್ಯಕೀಯ ಮಹಾವಿದ್ಯಾಲಯ

ನಂದಿನಗರ, ಅ. ಪೆ. ಸಂಖ್ಯೆ 6, ಬೀದರ – 585 401 (ಕರ್ನಾಟಕ)

ಡೀನ್‌ರವರ ಕಾರ್ಯಾಲಯ

ದೂರವಾಣಿ : 08482 - 245106
ಇ-ಮೇಲ್ : deanvcb@gmail.com

ಸಂಖ್ಯೆ ಡೀನ್/ಪವೈಮ(ಬೀ)/2020–21 ದಿನಾಂಕ 14–10–2020

## ಅಧಿಸೂಚನೆ

**ವಿಷಯ** : ಶಿಕ್ಷಕ ಸಿಬ್ಬಂದಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು

**ಉಲ್ಲೇಖ:** 1) ಕುಲಸಚಿವರ ಆದೇಶ ಸಂಖ್ಯೆ R/VCB-CT/2020-21/486-A Dt 04-09-20

2) ಕುಲಸಚಿವರ ಆದೇಶ ಸಂಖ್ಯೆ R/93BOM/AP(CT)/Honorarium/20-21/965 Dtd 17-07-20

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದ ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣದಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ 179 ದಿನಗಳ ಮೀರದಂತೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬೋಧಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿ ಅಹ್ವಾನಿಸಲಾಗಿದೆ.

| ಕ್ರ ಸ | ಹುದ್ದೆಯ ಹೆಸರು | ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ | 01 | ಬಿವ್ಹಿಎಸ್‌ಸಿ &ಎಎಚ್, ಎಂವ್ಹಿಎಸ್‌ಸಿ (ಪಶುವೈದ್ಯಕೀಯ ಶಸ್ತ್ರಚಿಕಿತ್ಸೆ & ಕ್ಷ ಕಿರಣ) |

ಮೇಲೆ ವಿವರಿಸಲಾದ ಮತ್ತು ಅರ್ಹತೆಯುಳ್ಳ ಅಭ್ಯರ್ಥಿಗಳು ಸ್ವವಿವರದೊಂದಿಗೆ ದಿನಾಂಕ 20–10–2020 ರಂದು ಡೀನ್‌ರವರ ಕಾರ್ಯಾಲಯ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸಂದರ್ಶನಕ್ಕೆ ಹಾಜರಾಗಲು ಮಾಹಿತಿಸಲಾಗಿದೆ.

1. ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಹತೆ ಇರುವ ಅಭ್ಯರ್ಥಿಗಳು ಕನಿಷ್ಠ ಎಂವ್ಹಿಎಸ್‌ಸಿ (ಶಸ್ತ್ರಚಿಕಿತ್ಸೆ)ಯಲ್ಲಿ ವಿದ್ಯಾರ್ಹತೆ ಹೊಂದಿರಬೇಕು
2. **ದಿನಾಂಕ 20–10–2020 ರಂದು ಬೆಳಗ್ಗೆ 10.00 ಗಂಟೆಗೆ** ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಎಂವ್ಹಿಎಸ್‌ಸಿ (ಶಸ್ತ್ರಚಿಕಿತ್ಸೆ) ಯಲ್ಲಿ ಉತ್ತೀರ್ಣ/ಅರ್ಹತೆಯುಳ್ಳ ಅಭ್ಯರ್ಥಿಗಳು ತಮ್ಮ ಸ್ವವಿವರದೊಂದಿಗೆ ಮೂಲ ದಾಖಲಾತಿಗಳ ಸಹಿತ ನಕಲು ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು
3. ದಿನಾಂಕ 20–10–2020 ರಂದು ಬೆಳಗ್ಗೆ 10.00 ಗಂಟೆಗೆ ತಮ್ಮ ಸ್ವಂತ ಖರ್ಚಿನಲ್ಲಿಯೆ ಸಂದರ್ಶನಕ್ಕೆ ಭಾಗವಹಿಸುವುದು
4. ಮೇಲೆ ತಿಳಿಸಲಾದ ಹುದ್ದೆಗಳು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿದ್ದು, ಈ ಗುತ್ತಿಗೆ ನೇಮಕಾತಿಗೆ ಖಾಯಂ ಮತ್ತು ಹಿರಿತನ ಅರ್ಹತೆಗೆ ಪರಿಗಣಿಸುವುದಿಲ್ಲ ಹಾಗೂ ಈ ಗುತ್ತಿಗೆ ನೇಮಕಾತಿ ಹೊಂದಿರುವ ಅಭ್ಯಾರ್ಥಿಗಳಿಗೆ ಮುಂಚಿತವಾಗಿ ಮಾಹಿತಿ ನೀಡದೆ ರದ್ದು ಪಡಿಸುವ ಮತ್ತು ತೆಗೆದುಹಾಕುವ ಹಕ್ಕನ್ನು ಡೀನ್‌ರವರು ಹೊಂದಿರುತ್ತಾರೆ.
5. ಪಿಎಚ್‌ಡಿ ಹೊಂದಿರುವ ಅಭ್ಯರ್ಥಿಗಳಿಗೆ ರೂ. 38,000/– ಪ್ರತಿ ತಿಂಗಳು ಹಾಗೂ ಎಂವ್ಹಿಎಸ್‌ಸಿ ಪಡೆದಿರುವ ಅಭ್ಯರ್ಥಿಗಳಿಗೆ ರೂ. 35,000/– ಪ್ರತಿ ತಿಂಗಳಂತೆ ಸಂಭಾವನೆ/ವೇತನ ನೀಡಲಾಗುವುದು.
6. ಈ ಅಧಿಸೂಚನೆ ಅನುಸಾರವಾಗಿ ನೇಮಕಾತಿ ಹೊಂದಿರುವ ಆಭ್ಯರ್ಥಿಗಳನ್ನು ಡೀನ್‌ರವರು ನಿಗದಿ ಪಡಿಸಿದ ಕೆಲಸದ ಮೇಲೆ ನಿಯೋಜಿಸಲು ಹಕ್ಕನ್ನು ಹೊಂದಿರುತ್ತಾರೆ.
7. ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು
8. ಅಭ್ಯರ್ಥಿಗಳು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು

14/10/2020

ಡೀನ್(ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಬೀದರ

ಡೀನ್(ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಅ.ಪೆ.ಸಂಖ್ಯೆ 6, ಬೀದರ

**ಪ್ರತಿ:**

1. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಹಾಸನ/ಶಿವಮೊಗ್ಗ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಪ್ರಚುರ ಪಡಿಸಲು ಕೋರಿದೆ